ದಿನಾಂಕ 18.01.2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು</u> : ಶ್ರೀ ಜಿಎಂಬಿ ವಕೀಲರಿಂದ:

1 ನೇ ಮತ್ತು 2ನೇ ಪ್ರತಿವಾದಿ ಮುಂಬೈನ ಖಾಯಂ ನಿವಾಸಿಗಳು. 3ನೇ ಪ್ರತಿವಾದಿ ಕಲ್ಯಾ ಗ್ರಾಮದ ಹಾಳೆಕಟ್ಟೆಯ ಖಾಯಂ ನಿವಾಸಿ. ದಾವಾ ಆಸ್ತಿಯಿಂದ 3ನೇ ಪ್ರತಿವಾದಿಯ ಮನೆಗೆ ಎಷ್ಟು ದೂರವಾಗುತ್ತದೆ ಎಂದು ನನಗೆ ಗೊತ್ತಿಲ್ಲ. 3ನೇ ಪ್ರತಿವಾದಿ ವಾಸವಿರುವ ಮನೆಯು ಅವರ ತಾಯಿ ಮನೆಯಾಗಿರುತ್ತದೆ. ಅವರ ತಾಯಿಯ ಹೆಸರು ನನಗೆ ನೆನಪಿಲ್ಲ. 1 ರಿಂದ 3ನೇ ಪ್ರತಿವಾದಿಯ ತಂದೆಯವರಾದ ನಾವೂ ಪೂಜಾರಿಯವರು 3ನೇ ಪ್ರತಿವಾದಿಯ ತಾಯಿ ಮನೆಯಾದ ಕಲ್ಯಾ ಗ್ರಾಮದಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾವೂ ಪೂಜಾರಿಯವರು ಮರಣ ಹೊಂದಿ ಎಷ್ಟು ದಿನಗಳಾಗಿವೆ ಎಂದು ನನಗೆ ಗೊತ್ತಿಲ್ಲ. ಅವರ ಮರಣ ಪ್ರಮಾಣಪತ್ರವನ್ನು ನಾನು ಪಡೆದುಕೊಂಡಿರುವುದಿಲ್ಲ. ಅವರ ಮರಣಪ್ರಮಾಣಪತ್ರವನ್ನು ಹಾಜರುಪಡಿಸಿದರೆ ಅವರು ಕಲ್ಯಾ ಗ್ರಾಮದಲ್ಲಿ ಮರಣ ಹೊಂದಿರುವ ವಿಷಯ ತಿಳಿದು ಬರುತ್ತದೆ ಎಂಬ ಕಾರಣದಿಂದ ಸದ್ರಿ ಮರಣಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಆಗಿನ ದಿನಗಳಲ್ಲಿ ನಮಗೆ ಮರಣಪ್ರಮಾಣಪತ್ರ ಪಡೆದುಕೊಳ್ಳುವ ಬಗ್ಗೆ ತಿಳಿದಿರಲಿಲ್ಲ ಎಂದು ನುಡಿಯುತ್ತಾರೆ. ನಾವೂ ಪೂಜಾರಿಯವರು ಸೂಡ ಗ್ರಾಮದಲ್ಲಿ ಮರಣಪಟ್ಟ ಬಗ್ಗೆ ಯಾವುದೇ ದಾಖಲೆಗಳಿಲ್ಲ.

4 ನೇ ಪ್ರತಿವಾದಿಯು ದಾವಾ ಆಸ್ತಿಯಲ್ಲಿ ಅವರ ತಂದೆಯಾದ ಅಪ್ಪು ಪೂಜಾರಿಯವರು ಮೃತಪಡುವವರೆಗೂ ವಾಸವಿದ್ದರು. ತದನಂತರ ಅವರು ಉಡುಪಿ

ತಾಲೂಕಿನ ಮಟ್ಟಾರು ಗ್ರಾಮದಲ್ಲಿ ವಾಸವಾಗಿದ್ದಾರೆ. ಅಪ್ಪು ಪೂಜಾರಿಯವರು ಯಾವ ದಿನಾಂಕ ಮತ್ತು ವರ್ಷದಲ್ಲಿ ಮೃತಪಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಎ.ಹೆ.ಸಿ.ನ್ಯಾ ಮತ್ತು ಪ್ರ ದ ನ್ಯಾ ದಂ,
ಕಾರ್ಕಳ.